**ಜೀವನವು ವಿಚಾರಣೀಯವಾಗಿದೆ**

'ಅನೇಕ ಸಲ ವಿವಿಧ ಯೋನಿಗಳಲ್ಲಿ ಜನಿಸಿದನಂತರ ಮನುಷ್ಯ ಜನ್ಮ ಪ್ರಾಪ್ತವಾಗಿದೆ. ಜೀವನಾವಧಿ ಕಡಿಮೆಯಾಗಿದ್ದರೂ ಅಷ್ಟೇ ಅವಧಿಯಲ್ಲಿ ಇತರ ಜನ್ಮಗಳಲ್ಲಿ ಸಾಧಿಸಲು ಸಾಧ್ಯವಾಗದ್ದನ್ನು ಮಾನವಜನ್ಮದಲ್ಲಿ ಸಾಧಿಸಬೇಕು.'

ವಿಷಯಪ್ರವೇಷ: ನಾವು ದೈನಂದಿನ ಜೀವನದಲ್ಲಿ ನೋಡಿದ ಹಾಗೆ ಪ್ರತಿಯೊಬ್ಬನ ಪ್ರತಿದಿನದ ಕಾರ್ಯಾಚರಣೆಗಳು ಒಂದಿಲ್ಲೊಂದು ಸಲ ಯಾರಿಂದಲಾದರೂ ವಿಚಾರಿಸಲ್ಪಡುತ್ತವೆ. ಬಾಲ್ಯದಲ್ಲಿ ತಂದೆ-ತಾಯಿಗಳು ವಿಚಾರಿಸುತ್ತಾರೆ. ವಿದ್ಯಾರ್ಥಿ ದೆಶೆಯಲ್ಲಿ ಉಪಾಧ್ಯಾಯರ ವಿಚಾರಣೆಗೆ ಒಳಪಡಬೇಕಾಗುತ್ತದೆ. ಯಾವುದಾದರೂ ಕೆಲಸಕ್ಕೆ/ಉದ್ಯೋಗಕ್ಕೆ ಸೇರಿಕೊಂಡಾಗ ಮೇಲಧಿಕಾರಿಗಳಾಗಲೀ / ಮಾಲಿಕರಾಗಲೀ ತಮ್ಮ ಕೆಲಸಗಾರರ ಬಗ್ಗೆ ಮೇಲ್ವಿಚಾರಣೆ ಮಾಡುತ್ತಲೇ ಇರುತ್ತಾರೆ. ಸ್ವತಂತ್ರ ವೃತ್ತಿ ಇದ್ದರೆ ಅದಕ್ಕೆ ಸಂಬಂಧಿಸಿದವರು / ಪಬ್ಲಿಕ್ / ಸರಕಾರ ಇತ್ಯಾದಿ. ಬಾಲಕರಾಗಿದ್ದಾಗ ಮಾಡಿದ ಒಳ್ಳೆಯ ಕಾರ್ಯಗಳಿಗೆ ಶ್ಲಾಘನೆ ಮತ್ತು ಅಪರಾಧಗಳಿಗೆ ಉಪದೇಶ, ಕ್ಷಮೆಗಳು ಇರುತ್ತವೆ. ವಯಸ್ಸಿಗೆ ಬಂದ ಮೇಲೆ ಮಾಡಿದ ಸತ್ಕಾರ್ಯಗಳಿಗೆ ಕೀರ್ತಿ, ಪುರಸ್ಕಾರಗಳು ಲಭಿಸುತ್ತವೆ. ಎಸಗಿದ ಅಪರಾಧಗಳು ಲಘುವಾಗಿದ್ದರೆ ಬುದ್ಧಿ ಹೇಳುತ್ತಾರೆ ಅಥವಾ ಉದಾಸೀನ ಮಾಡುತ್ತಾರೆ. ಅಪರಾಧವು ಅಪಾಯಕಾರಿಯಾಗಿದ್ದರೆ ಕಾನೂನಿನ ವಿಚಾರಣೆಗೆ ಒಳಪಡಬೇಕಾಗುವುದು. ಇದು ಕೇವಲ ಇಹಲೋಕಕ್ಕೆ ಸೀಮಿತವಾಗಿಲ್ಲ. ಇಹಲೋಕದ ಯಾತ್ರಾ ಮುಗಿದ ನಂತರವೂ ಪ್ರತಿಯೊಬ್ಬ ವ್ಯಕ್ತಿಯ ಸಮಗ್ರ ಜೀವನದ ಕಾಯಾ, ವಾಚಾ ಮತ್ತು ಮನಸ್ಸುಗಳಿಂದ ಮಾಡಿದ ಸರ್ವಾಕಾರ್ಯಗಳ ವಿಚಾರಣೆ ನಡೆದೇ ನಡೆಯುತ್ತಿದೆ. ಅಲ್ಲಿಯೂ ವಿಚಾರಣೆ ಮಾಡತಕ್ಕ ಅಧಿಕಾರಿಗಳಿದ್ದಾರೆ ಎಂದು ವೇದ/ಪುರಾಣಗಳು ಸಾರುತ್ತವೆ.

ಏನ್ ಸರ್, ಈ ಆಧುನಿಕ ದಿನಗಳಲ್ಲಿ ಅದರಲ್ಲಿಯೂ ವಿಜ್ಞಾನ ಇಷ್ಟು ಮುಂದುವರಿದ ದಿನಗಳಲ್ಲಿ ಈ ತರದ ವೇದಾಂತಗಳಲ್ಲಿ ನಂಬಿಕೆ ಇಡಬಹುದೇ? ಯಮ-ಧರ್ಮ, ಪರಲೋಕಗಳು, ಮೇಲ್ವಿಚಾರಣೆ ಇವೆಲ್ಲವೂ ಕೇವಲ ನಂಬಿಕೆಗಳಲ್ಲವೇ ಅಥವಾ ಇವುಗಳು ಇವೆ ಎಂದು ನಿಜವಾಗಿಯೂ ನಂಬಬೇಕೇ?

ಒಂದು ವಾಸ್ತವಿಕವಾದ ಅಂಶವೆಂದರೆ ದೇವ-ದೇವತೆಗಳು, ಧರ್ಮಾಧರ್ಮ, ಸ್ವರ್ಗ-ನರಕ, ಪುಣ್ಯ-ಪಾಪ ಇಂಥ ಅತೀಂದ್ರಿಯಪದಾರ್ಥಗಳು ಆಧುನಿಕ ವಿಜ್ಞಾನಕ್ಕೆ ವಿಷಯಗಳೇ ಅಲ್ಲ. ಮಾನವನ ಇಹಲೋಕ ಯಾತ್ರಾ ನಂತರ ಅವನು ಎಲ್ಲಿ ಹೋಗುವನು, ಏನಾಗುವನು ಎಂದು ವಿಜ್ಞಾನಿಗಳನ್ನು ಕೇಳಿದರೆ ಅವರು ಮೌನವಾಗಿಯೇ ಇರುತ್ತಾರೆ. ಜೀವನಾಂತ್ಯದಲ್ಲಿ ಮಾನವನ ಜೀವನವು ವಿಚಾರಣೀಯವೇ ಅಥವಾ ಇಲ್ಲವೇ ಎಂದು ಕೇಳಿದರೆ ಆಗಲೂ ವಿಜ್ಞಾನಿಗಳು / ವಿಜ್ಞಾನವು ಮೌನವೇ!

ಪ್ರಾಮಾಣಿಕ ಜ್ಞಾನ ಸಾಧನಗಳು : ಪ್ರಾಮಾಣಿಕ ಜ್ಞಾನಸಾಧನಗಳು (ಮಧ್ವಸಿದ್ಧಾಂತದಲ್ಲಿ ಅನುಪ್ರಾಮಾಣಗಳು) ಮೂರುವಿಧವೆಂದು ಶಾಸ್ತ್ರಗಳಲ್ಲಿ ಕಾಣಬರುತ್ತದೆ.

೧. ಪ್ರತ್ಯಕ್ಷ : ನಿರ್ದುಷ್ಟವಾದ ಜ್ಞಾನೇಂದ್ರಿಯಗಳು - ನಿರ್ದುಷ್ಟವಾದ ವಸ್ತುಗಳ ಸಂಪರ್ಕ ಪಡೆದಾಗ ಪ್ರಾಪ್ತವಾಗುವ ಜ್ಞಾನ ಪ್ರಾಮಾಣಿಕ. ಇದು ಐಂದ್ರಿಯಕ ಕ್ಷೇತ್ರ.

೨. ಅನುಮಾನ : ನಿರ್ದುಷ್ಟವಾದ ಯುಕ್ತಿಗಳಿಂದ ಪ್ರಾಮಾಣಿಕ ಜ್ಞಾನ ಲಭ್ಯ. ಆದರೆ ಇದು ಐಂದ್ರಿಯಕ ಕ್ಷೇತ್ರದಲ್ಲಿ ಪ್ರತ್ಯಕ್ಷವನ್ನವಲಂಬಿಸುತ್ತದೆ. ಅತೀಂದ್ರಿಯ ಕ್ಷೇತ್ರಗಳಲ್ಲಿ, ಅಂದರೆ ದೇವ ಧರ್ಮ ಇತ್ಯಾದಿಗಳ ವಿಚಾರಗಳಲ್ಲಿ ಆಗಮವನ್ನವಲಂಬಿಸುತ್ತದೆ. ಅಂದರೇನೇ ಅದು ನಿರ್ದುಷ್ಟ ಯುಕ್ತಿ. ನಿರಾಧಾರ ಯುಕ್ತಿಗಳು ಪ್ರಮಾಣ ಪದವಿಯನ್ನು ಹೊಂದುವುದಿಲ್ಲ.

೩. ಆಗಮ: ನಿರ್ದುಷ್ಟ ಶಬ್ದವೇ ಆಗಮವು. ಆಗಮಕ್ಕೆ ಪ್ರಮಾಣ್ಯವಿದೆ ದೋಷರಹಿತವಾಗಿರುವುದರಿಂದ. ಯಾಕೆ ದೋಷರಹಿತವೆಂದರೆ ಅಪೌರುಷೇಯವಾದ್ದರಿಂದ. ಪೌರುಷೇಯ ಆಗಮಗಳು, ಅಂದರೆ ಸ್ಮೃತಿ ಪುರಾಣಗಳು,

ವೇದಾನುಸಾರಿಯಾದ್ದರಿಂದ ಅವುಗಳೂ ಪ್ರಾಮಾಣಿಕವೇ. ಆಗಮಗಳಿಗೆ ದೇವ, ದೇವತೆಗಳು, ಧರ್ಮ, ಸ್ವರ್ಗ, ನರಕ, ಪುಣ್ಯ, ಪಾಪ ಇತ್ಯಾದಿ ಅತೀಂದ್ರಿಯ ವಿಚಾರಗಳೇ ವಿಷಯಗಳು.

ಆದ್ದರಿಂದ ಅತೀಂದ್ರಿಯ ವಿಷಯಗಳಾದ ದೇವ, ಧರ್ಮ, ಸ್ವರ್ಗ, ನರಕ, ಇತ್ಯಾದಿ ವಿಷಯಗಳಲ್ಲಿ, ಇಂದ್ರಿಯಗಳು ಜ್ಞಾನಸಾಧನವಾಗದ ಪ್ರಯುಕ್ತ ಮತ್ತು ಯುಕ್ತಿ ಸಹಾಯವಾಗದ ಪ್ರಯುಕ್ತ ಆಗಮಗಳೇ ಪರಮ ಪ್ರಮಾಣಗಳು ಎಂದು ನಿಶ್ಚಯಿಸಲ್ಪಟ್ಟಿದೆ.

ಪರಲೋಕಕ್ಕೆ ಹೋಗಿ ಬಂದವರು: ವೇದ ಪುರಾಣಗಳಲ್ಲಿ ಪರಲೋಕದ ವಿಷಯವಾಗಿ ಸಾಕಷ್ಟು ವಿಷಯಗಳು ನಿರೂಪಿತವಾಗಿವೆ. ಅಷ್ಟೇ ಅಲ್ಲ ಅಲ್ಲಿಗೆ ಹೋಗಿ ಬಂದವರ ನಿದರ್ಶನಗಳು ವಿರಳ. ಆದರೂ ಇವೆ.

ಕೇವಲ ಎರಡುನೂರು ವರ್ಷಗಳ ಹಿಂದೆ ವಿಜಯದಾಸರೆಂಬ ಭೃಗ್ವಂಶ ಸಂಭೂತರಾದ ಮಹನೀಯರಿದ್ದರು. ಅವರಿಗೆ ಮೋಹನದಾಸರೆಂಬ ಒಬ್ಬ ಸಾಕು ಮಕ್ಕಳಿದ್ದರು. ಯಮದೂತರು ತಪ್ಪು ಲೆಕ್ಕಾಚಾರದಿಂದ ಅವರನ್ನು ಯಮಪಟ್ಟಣಕ್ಕೆ ಕರೆದೊಯ್ದಿದ್ದರು. ಮೋಹನದಾಸರಿಗೆ ಬಂದ ಅಪಮೃತ್ಯುವನ್ನು ತಿಳಿದು ತತ್ಕಾಲದಲ್ಲಿ ವಿಜಯದಾಸರು ಯಮಲೋಕಕ್ಕೆ ಹೋಗಿ ಯಮಧರ್ಮನೊಂದಿಗೆ ಮಾತನಾಡಿ ಮೋಹನದಾಸರನ್ನು ಮರಳಿ ಕರೆತಂದರು. ಮೋಹನದಾಸರು ಮರಳಿ ಬಂದ ನಂತರ, ತಮಗೆ ಇಹಲೋಕದ ಪ್ರಜ್ಞೆ ಬಂದೊಡನೆ ಒಂದು ದೇವರನಾಮವನ್ನು ರಚಿಸಿದರು. 'ತಂದೆ ವಿಜಯರಾಯ ಸಮಯಕೆ ಬಂದ್ಯೋ ವಿಜಯರಾಯ'. ಈ ದೇವರನಾಮದಲ್ಲಿ ತಾವು ಯಮಲೋಕದಲ್ಲಿ ಕಂಡದ್ದನ್ನು ವರ್ಣಿಸಿದ್ದಾರೆ. ಪರಲೋಕವಿದೆ ಎಂಬುದಕ್ಕೆ ಶಾಸ್ತ್ರಾನುಸಾರಿ ಅನುಭಾವಿಕ ಪುರಾವೆ ಇದು. ಪರಲೋಕವಿದೆ ಎಂಬುದಕ್ಕೆ ಪ್ರಕೃತ ನಮಗಿಷ್ಟು ಸಾಕು.

ಯಮಧರ್ಮರಿಂದ ವಿಚಾರಣೆ: ಈ ಕೆಳಗೆ ಕಾಣಿಸುವ ಮೂರು ಶ್ಲೋಕಗಳು ಶ್ರೀಮಧ್ವಾಚಾರ್ಯರು ರಚಿಸಿದ ಕೃಷ್ಣಾಮೃತಮಹಾರ್ಣವವೆಂಬ ಗ್ರಂಥದಲ್ಲಿ ಕಾಣಬರುತ್ತವೆ. ಈ ಮೂರು ಶ್ಲೋಕಗಳು ಯಮಧರ್ಮ ಮತ್ತು ನರಕಭಾಗಿಯಾದ ವ್ಯಕ್ತಿಯ ಮಧ್ಯೆ ನಡೆದ ಸಂಭಾಷಣೆಯಾಗಿದೆ.

ನಾವು ನಮ್ಮ ಲೋಕಯಾತ್ರೆಯಲ್ಲಿ ಸಾಮಾನ್ಯವಾಗಿ ಕಾಣಬರುವ ದೃಶ್ಯಗಳನ್ನು ನೆನೆಯುವಾ. ವೈದ್ಯರು ಆಸ್ಪತ್ರೆಗಳಲ್ಲಿ ಕಾರ್ಯಕ್ಷೇತ್ರಗಳಲ್ಲಿ ಮೇಲ್ವಿಚಾರಣೆ ನಡೆಸಲು ರೌಂಡ್ಸ್ ಹಾಕುತ್ತಾರೆ. (ಮೇಲ್ವಿಚಾರಣೆಗಾಗಿ ಸುತ್ತಾಡುತ್ತಾರೆ). ಇಂಜಿನಿಯರುಗಳು ತಮ್ಮ ಕಾರ್ಯಕ್ಷೇತ್ರಗಳಾದ ಫ್ಯಾಕ್ಟರಿ / ಬಿಲ್ಡಿಂಗ್ / ವರ್ಕ್ ಶಾಪ್ ಗಳಲ್ಲಿ ಪ್ರಗತಿಯನ್ನು ಪರೀಕ್ಷಿಸಲು ರೌಂಡ್ಸ್ ಹಾಕುತ್ತಾರೆ. ಆಫೀಸುಗಳಲ್ಲಿಯೂ ಸಹ ಇಂಥದೇ ಆದ ಮೇಲ್ವಿಚಾರಣೆ ಇದ್ದೇ ಇರುತ್ತದೆ. ಇದೇ ರೀತಿಯಾಗಿ ಯಮಧರ್ಮರಾಯರೂ ತಮ್ಮ ಅನುಚರರು ಕೆಲಸಮಾಡುವ ಕ್ಷೇತ್ರಗಳಲ್ಲಿ ರೌಂಡ್ಸ್ ಹಾಕುತ್ತಲೇ ಇರುತ್ತಾರೆ. ಒಂದು ದಿನ ಅವರು ಹಾಗೆ ರೌಂಡ್ಸ್ ಹಾಕುತ್ತಿದ್ದಾಗ ನರಕದಲ್ಲಿ ಶಿಕ್ಷೆಗೊಳಗಾದ ವ್ಯಕ್ತಿಯೊಬ್ಬನು ತುಂಬ ನರಳುತ್ತ, ಕೂಗುತ್ತ ಯಾತನೆಯನ್ನನುಭವಿಸುತ್ತಿದ್ದನು. ಆ ವ್ಯಕ್ತಿಯನ್ನು ನೋಡಿ ಯಮರಾಯರು ಅವನೊಡನೆ ಮಾತನಾಡುತ್ತಾರೆ.

'ನರಕೇ ಪಚ್ಯಮಾನಸ್ತು ಯಮೇನ ಪರಿಭಾಷಿತಃ

ಕಿಂ ತ್ವಯಾ ನಾರ್ಚಿತೋದೇವಃ ಕೇಶವಃ ಕ್ಲೇಶನಾಶನಃ ' || ಕೃ. ಮ. ||

ಧರ್ಮರಾಯ: 'ಹೇ, ದುಃಖಭಾಗಿಯಾದ ಜೀವನೇ, ಇಲ್ಲಿಗೆ ಬಂದು ಶಿಕ್ಷೆ ಅನುಭವಿಸತಕ್ಕ ಸಂದರ್ಭ ನಿನಗೆ ಏಕೆ ಪ್ರಾಪ್ತವಾಯಿತು? ನೀನು ಭೂಲೋಕದಲ್ಲಿರುವಾಗ ಕ್ಲೇಶನಾಶಕವಾದ ಶ್ರೀಕೇಶವನನ್ನು ಅರ್ಚಿಸಲಿಲ್ಲವೇ? ಆ ಕಾರಣದಿಂದ ಇಲ್ಲಿಗೆ ಬರುವಂತಾಯಿತು.

ಯಾತನಾ ಜೀವಿ: ಸ್ವಾಮೀ ಧರ್ಮರಾಯರೇ, ನಾವು ಕಡುಬಡವರು. ನಮಗೆ ಯಾವ ದೇವನನ್ನೂ ಅರ್ಚನೆಮಾಡಲು ಸಾಧ್ಯವಾಗಲೇ ಇಲ್ಲ.

'ದ್ರವ್ಯಾಣಾಮಪ್ಯಭಾವೇ ತು ಸಲಿಲೇನಾಪಿ ಪೂಜಿತಃ

ಯೋ ದದಾತಿ ಸ್ವಕಂಸ್ಥಾನಂ ಸತ್ವಯಾ ಕಿಂ ನ ಪೂಜಿತಃ || ಕೃ. ಮ. ||

ಧರ್ಮರಾಯ: ಪರಮಾತ್ಮನ ಅರ್ಚನೆಗೆ ದ್ರವ್ಯಬೇಕು ಎಂದು ಹೇಳಿದವರಾರು. ಪರಮಾತ್ಮನ ಪೂಜೆಗೆ ಸಂಪತ್ತಿನ ವೈಭವ ಬೇಕಾಗಿಲ್ಲ. ಹೂವು, ಹಣ್ಣು, ಧೂಪ, ದೀಪ, ಇತ್ಯಾದಿಗಳು ಇಲ್ಲದಿದ್ದರೂ ಅಂಥ ದೊಡ್ಡ ಲೋಪವೇನಲ್ಲ. ಭಕ್ತಬಡವರು ನೀರಿನಿಂದ ಪೂಜಿಸಿದರೂ ಸಾಕು. ಕರುಣಾಮಯನಾದ ಶ್ರೀಹರಿ ನೀನು ಮಾಡತಕ್ಕ ಕೈಂಕರ್ಯಕ್ಕೆ ಮೆಚ್ಚಿ ಸ್ವಸ್ಥಾನವಾದ ವೈಕುಂಠದಲ್ಲಿ ನಿನಗೆ ಸ್ಥಾನವನ್ನು ಕೊಡುತ್ತಾನೆ. ಇಂಥ ಸುಲಭವಾದ ಪೂಜೆಯನ್ನು ಭೂಲೋಕದಲ್ಲಿ ನೀನು ಏಕೆ ಮಾಡಲಿಲ್ಲ?

ಯಾತನಾ ಜೀವಿ: ಸ್ವಾಮೀ ಧರ್ಮರಾಯರೇ ತಾವು ನಮ್ಮೂರು ನೋಡಿರುವಿರಾ?

ಧರ್ಮರಾಯ: ನಾನು ಸಂದರ್ಶಿಸದ ಊರುಗಳಿರಲು ಸಾಧ್ಯವೇ? ಎಲ್ಲ ಊರುಗಳನ್ನೂ ನೋಡಿದ್ದೇನೆ. ಯಾಕೆ ಕೇಳಿದಿ?

ಯಾತನಾ ಜೀವಿ: ತಾವು ನಮ್ಮೂರನ್ನು ನೋಡಿರಲು ಸಾಧ್ಯ ಆದರೆ ನಮ್ಮೂರ ಹೊರಗಿನ ಭಾವಿಯನ್ನು ನೋಡಿರುವಿರಾ? ಯಾಕೆಂದರೆ ಅದು ಊರಿಂದ ಒಂದು ಮೈಲು ದೂರವಿದೆ. ನಾವುಗಳು ಒಂದು ಕೊಡ ನೀರನ್ನು ಭಾವಿಯಿಂದ ತರಬೇಕಾದರೆ, ಹಗ್ಗವನ್ನು ಎತ್ತಿನಗಾಡಿಯಲ್ಲಿ ಹಾಕಿಕೊಂಡು ಹೋಗಿ ಒಂದು ಕೊಡ ನೀರನ್ನು ತರುತ್ತೇವೆ. ತಂದ ನೀರನ್ನು ಎಲ್ಲರೂ ಲೆಕ್ಕಾಚಾರದಿಂದ ಹಂಚಿಕೊಂಡು ಕುಡಿಯುತ್ತೇವೆ. ಇಂಥ ವಿಚಿತ್ರ ಸನ್ನಿವೇಶದಲ್ಲಿ ಪೂಜೆ ಪುನಸ್ಕಾರಗಳನ್ನು ನೀರಿನಿಂದ ಮಾಡುವದೆಂತು ಸ್ವಾಮಿ ನೀವೇ ಹೇಳಿರಿ !

ಧರ್ಮರಾಯ: ಪಾಪ! ನೀರಿಗಾಗಿ ನಿಮ್ಮೂರಿನಲ್ಲಿ ಅಷ್ಟು ತೊಂದರೆ ಇದ್ದರೆ ಹೋಗಲಿ ಬಿಡು. ನೀರು ಸಹ ಇಲ್ಲದೆಯೇ ಭಗವದಾರಾಧನೆ ಸಾಧ್ಯವಿದೆ.

'ನಾರಸಿಂಹೋ ಹೃಷಿಕೇಶಃ ಪುಂಡರೀಕ ನಿಭೇಕ್ಷಣಃ

ಸ್ಮರಣಾನ್ಮುಕ್ತಿದೋ ನೃಣಾಂ ಸ ತ್ವಯಾ ಕಿಂ ನ ಪೂಜಿತಃ ' || ಕೃ.ಮ ||

ನೀನು ಇಷ್ಟು ಮಾತನಾಡುತ್ತೀಯೆ. ನಾಲಗೆ ನಿನ್ನ ಸ್ವಾಧೀನವಿದೆ. ಬೇಕಾದಷ್ಟು ಮಾತನಾಡಲು ಬರುತ್ತದೆ ಆದರೆ ನಿನ್ನ ಬಾಯಿಯಿಂದ ನಾರಾಯಣ, ಹರಿ, ಕೃಷ್ಣ ಇತ್ಯಾದಿ ಯಾವ ಭಗವನ್ನಾಮೋಚ್ಚಾರಣೆ ಮಾಡಿದರೂ ಸಹ ಪರಮಾತ್ಮನು ಮೋಕ್ಷವನ್ನು ಕೊಡುವನು.

ಈ ವಿಚಾರವನ್ನು ನೀನು ಯಾರ ಬಾಯಿಯಿಂದಲೂ ಕೇಳಿ ತಿಳಿದುಕೊಳ್ಳಲಿಲ್ಲವೇ? ನಾಲಿಗೆ ಇದ್ದರೂ ನಾರಾಯಣ ಎನ್ನದೇ ನರಕವಾಸಕ್ಕೆ ಬಂದು ದುಃಖವನ್ನು ಅನುಭವಿಸುತ್ತಿರುವಿಯಲ್ಲ!

ಯಮಧರ್ಮರಾಯರು ಮುಂದುವರಿದು ಯಾತನಾಜೀವಿಯನ್ನು ಕುರಿತು ಹೇಳುತ್ತಾರೆ - 'ಹೇ ದುಃಖಿ ಜೀವನೇ ಈ ಸಲ ನೀನು ಭೂಲೋಕಕ್ಕೆ ಹೋದಮೇಲೆ ಯಾವುದಾದರೊಂದು ಕ್ಷುಲ್ಲಕ ಕಾರಣಗಳನ್ನು ಹುಡುಕಿಕೊಂಡು ಹರಿ ಅರ್ಚನೆಯನ್ನು ಉದಾಸೀನ ಮಾಡಕೂಡದು. ನಿನ್ನ ಸಮಸ್ಯೆಗಳಿಗೆಲ್ಲ ಸೂಕ್ತ ಪರಿಹಾರವನ್ನು ತಿಳಿಸಿದ್ದೇನೆ. ಇಷ್ಟಾದರೂ ಯಾವುದೇ ಕಾರಣಕ್ಕಾಗಿ ಉದಾಸೀನ ಮಾಡಿ ಇಲ್ಲಿಗೆ ಬಂದರೆ ತೀವ್ರ ಶಿಕ್ಷೆಗಳನ್ನನುಭವಿಸಬೇಕಾಗುತ್ತದೆ', ಎಂದು ಎಚ್ಚರಿಕೆ ಕೊಟ್ಟರು.

ಈ ವಿಚಾರದಲ್ಲಿ ಇನ್ನೂ ಕೆಲವು ಶಾಸ್ತ್ರೀಯ ಸಲಹೆಗಳಿವೆ:

ಕಲಿಯುಗದಲ್ಲಿ ಕಲಿ ಪ್ರಭಾವ ಪ್ರಯುಕ್ತ ಯಾವ ಒಳ್ಳೆಯ ಕೆಲಸಗಳಿಗೂ ಪ್ರತಿಬಂಧಕಗಳು ಮುಂದಾಗಿ ಬರುತ್ತವೆ. ಜನಗಳಿಗೆ ಅನೇಕ ವಿಧ ಪಾಪಕಾರ್ಯಗಳನ್ನು ಮಾಡಲು ಸುಲಭವಾಗಿ ಬುದ್ಧಿ ಉಂಟಾಗುತ್ತದೆ. ಅಂಥ ಪಾಪಗಳು ನಮ್ಮಿಂದಾಗಬಾರದೆಂದರೆ ಭಕ್ತಿಶ್ರದ್ಧೆ ವಿಶ್ವಾಸಗಳಿಂದ ಅಚ್ಯುತನ ನಾಮೋಚ್ಚಾರಣೆ ಮಾಡುತ್ತಿರಬೇಕು. ಇದೊಂದೇ ಸದುಪಾಯ.

ನಿತ್ಯದ ಅನುಭವದಲ್ಲಿ ನಾವು ನೋಡುವಹಾಗೆ, ಜನರು ಬೇಕಾದ್ದನ್ನೆಲ್ಲಾ ಬೇಕಾದಷ್ಟು ಕಾಲ ಮಾತನಾಡುತ್ತಲೇ ಇರುತ್ತಾರೆ. ಅವರ ನಾಲಗೆಯೂ ಸ್ವಾಧೀನವಿದೆ. ಆದರೆ ನಾರಾಯಣನ ನಾಮವನ್ನುಚ್ಚರಿಸದೇ ನರಕಭಾಗಿಗಳಾಗುತ್ತಾರೆ. ಇದೊಂದು ಮಹದಾಶ್ಚರ್ಯವೆನ್ನುತ್ತಾರೆ - ಆಚಾರ್ಯರು ಕೃಷ್ಣಾಮೃತ ಮಹಾರ್ಣವದಲ್ಲಿ.

ಗೀತಾಭಾಷ್ಯ ಹೇಳುತ್ತದೆ : 'ಸ್ವವಿಹಿತ ವೃತ್ತ್ಯಾ ಭಕ್ತ್ಯಾ ಭಗವದಾರಾಧನಮೇವ ಪರಮೋ ಧರ್ಮಃ'

'ಮಾನವನು ವರ್ಣಾಶ್ರಮೋಚಿತ ವಿಹಿತ ಕರ್ಮಗಳನ್ನು ಭಕ್ತಿಯಿಂದ ಭಗವದಾರಾಧನೆ ಎಂದು ತಿಳಿದು ಮಾಡಿದರೆ ಮುಕ್ತಿಯನ್ನು ಹೊಂದುತ್ತಾನೆ'.

ಭಾಗವತ ಹೇಳುತ್ತದೆ :

'ಲಬ್ಧ್ವಾ ಸುದುರ್ಲಭಮಿದುಂ ಬಹುಸಂಭವಾಂತೇ

ಮಾನುಷ್ಯಮರ್ಥ ದಮನಿತ್ಯಮಪೀಹಧೀರಃ

ತೂರ್ಣಂಯತೇತ ನಪತೇದನುಮೃತ್ಯು ಯಾವನ್ನಿಶ್ರೇಯಸಾಯ

ವಿಷಯಃ ಖಲು ಸರ್ವತಃ ಸ್ಯಾತ್'

'ಅನೇಕ ಸಲ ವಿವಿಧ ಯೋನಿಗಳಲ್ಲಿ ಜನಿಸಿದನಂತರ ಮನುಷ್ಯ ಜನ್ಮ ಪ್ರಾಪ್ತವಾಗಿದೆ. ಜೀವನಾವಧಿ ಕಡಿಮೆಯಾಗಿದ್ದರೂ ಅಷ್ಟೇ ಅವಧಿಯಲ್ಲಿ ಇತರ ಜನ್ಮಗಳಲ್ಲಿ ಸಾಧಿಸಲು ಸಾಧ್ಯವಾಗದ್ದನ್ನು ಮಾನವಜನ್ಮದಲ್ಲಿ ಸಾಧಿಸಬೇಕು'.

ಇನ್ನೊಂದು ಸೂಕ್ತ ಉಪದೇಶ: ಮಾನವಜನ್ಮವು ಇತರ ಜೀವಿಗಳಿಗಿಂತ ವಿಚಾರಗಳಲ್ಲಿ ಅತ್ಯಂತ ಭಿನ್ನವೂ ವೈಶಿಷ್ಟ್ಯಪೂರ್ಣವೂ ಆಗಿದೆ:

೧. ಇತರ ಜನ್ಮಗಳಲ್ಲಿ ನಾಲಗೆ ಇದ್ದರೂ ಮಾತನಾಡಲು ಆಗುತ್ತಿರಲಿಲ್ಲ. ಈ ಮಾನವಜನ್ಮದಲ್ಲಿ ಮಾತ್ರ ಮಾತನಾಡಲು ಬರುವುದರಿಂದ ಭಗವನ್ನಾಮಗಳನ್ನು ಉಚ್ಚರಿಸಬಹುದು, ಮಹಿಮೆಗಳನ್ನು ಕೊಂಡಾಡಬಹುದು.

೨. ಮಹಾತ್ಮರನ್ನು ಸಂಪರ್ಕಿಸಬಹುದು, ಸೇವಿಸಬಹುದು, ಉಪದೇಶ ಪಡೆಯಬಹುದು.

ಒಟ್ಟಿನಮೇಲೆ ಹೇಳಬೇಕಾದುದೇನೆಂದರೆ ಮಾನವನು ಇಹ-ಪರ ಎರಡು ಕಡೆಗೂ ಲಕ್ಷ್ಯವಿಡಬೇಕು. ವಿಹಿತ ಕರ್ಮಗಳನ್ನು ಅಲಕ್ಷ್ಯಮಾಡಿ ಅಂದರೆ ಸ್ನಾನ, ಸಂಧ್ಯಾ, ಜಪ, ತಪ, ನಿಯಮ, ವ್ರತ, ವೇದಾಧ್ಯಯನ, ಭಗವನ್ನಾಮೋಚ್ಚಾರಣೆ, ಹರಿಸೇವೆ, ಗುರುಸೇವೆ, ಮಾತಾಪಿತೃಗಳ ಸೇವೆ, ತೀರ್ಥಕ್ಷೇತ್ರ, ಪರೋಪಕಾರ ಇವುಗಳನ್ನು ತ್ಯಜಿಸಿ ಕೇವಲ ಲೌಕಿಕ ಸಾಧನೆಗಳಿಗಾಗಿ ಕಾಲ, ಶಕ್ತಿ, ಹಣ ಎಲ್ಲವನ್ನೂ ವಿನಿಯೋಗಿಸಿದರೆ ಪಾಪ ಸಾಧನೆಯಾಗುತ್ತದೆ. ಈ ಮೊದಲು ಉಲ್ಲೇಖಿಸಿದ ಯಮಧರ್ಮರ ಸಂಭಾಷಣೆಯೇ ಮಾರ್ಗದರ್ಶಿ. ಪ್ರತಿದಿನವೂ ಲೋಕವ್ಯವಹಾರದಲ್ಲಿ ಎಷ್ಟೇ ಕಾಲ ಕಳೇದರೂ, ಪ್ರತಿದಿನವೂ ವಿಹಿತ ವರ್ಣಾಶ್ರಮೋಚಿತವಾದ ಕರ್ಮಗಳನ್ನೂ, ಶ್ರವಣಾದಿಗಳ ಮೂಲಕ ಜ್ಞಾನಾರ್ಜನೆಯನ್ನೂ ನಿತ್ಯವೂ ಅದರ ನೈರಂತರ್ಯಗಳಿಂದ ಮಾಡುತ್ತಲೇ ಇರಬೇಕು. ಯಾಕೆಂದರೆ ನಮ್ಮ ಸಮಗ್ರ ಜೀವನವು ಮರಣಾನಂತರ

ವಿಚಾರಣೆಗೊಳಪಡುತ್ತದೆ. ಅದರಲ್ಲಿಯೂ ಲೌಕಿಕ ಸಾಧನೆಗಳಿಗಿಂತ ಪಾರಲೌಕಿಕ ಸಾಧನೆಗೆ ವಿಶೇಷ ಮಹತ್ವವಿದೆ. ಮೇಲೆ ಉಲ್ಲೇಖಿಸಿದ ಯಮಧರ್ಮರ ಮಾತುಗಳೇ ಮಾರ್ಗದರ್ಶಿ.

ಉಪಸಂಹಾರ: ವೇತನ ಕೊಡತಕ್ಕ ಯಜಮಾನನು ತನ್ನ ಕೆಲಸಗಾರರ ಕಾರ್ಯವನ್ನು ಕುರಿತು ವಿಚಾರಣೆ ಮಾಡುತ್ತಾನೆ. ಕಾರ್ಯವು ಸಮರ್ಪಕವಾಗಿದ್ದರೆ ಮಾತ್ರ ಅವನು ಸಂತೋಷ ಪಡುತ್ತಾನೆ. ಇಲ್ಲದಿದ್ದರೆ ಅಸಮಾಧಾನ ಪಡುತ್ತಾನೆ. ಇದರಂತೆಯೇ ಭಗವಂತನು ನಮಗೆ ಸುಧೃಡ ಅವಯವಗಳುಳ್ಳ ದೇಹವನ್ನೂ ಮತ್ತು ಸಮೀಚೀನವಾದ ಬುದ್ಧಿ ಮತ್ತು ಮನಸ್ಸುಗಳನ್ನು ದಯಪಾಲಿಸಿದ್ದಾನೆ. ಲೋಕದಲ್ಲಿ ಯಜಮಾನನಿಗೆ ಪ್ರಿಯವಾದದ್ದನ್ನು ಮಾಡಿ ಪ್ರೀತಿಪಡಿಸುವಂತೆ, ವೇದೋಕ್ತ ವಿಧಿನಿಷೇಧಗಳನ್ನು ತ್ಯಜಿಸಿ ಪರಮಾತ್ಮನ ಪ್ರೀತಿಗೆ ಪಾತ್ರರಾಗಬೇಕು. ಉಕ್ತ ಸತ್ಸಾಧನಗಳಿಂದ ಶ್ರೀಹರಿಯನ್ನು ಪ್ರೀತಿಪಡಿಸಿ ಅವನ ಪ್ರಸಾದದಿಂದ ಸಂಸಾರ ಬಂಧದಿಂದಲೂ ಮತ್ತು ಜನನ-ಮರಣ ಪ್ರವಾಹದಿಂದಲೂ ನಿವೃತ್ತಿ ಹೊಂದಬಹುದು. ವಸ್ತು ಸ್ಥಿತಿ ಹೀಗಿರುವಾಗ, ಜೀವನಾಂತ್ಯದಲ್ಲಿ, ನಮ್ಮ ಜೀವನದಲ್ಲಿ ಮಾಡಿದ ಸಕಲಕಾರ್ಯಗಳೂ ಧರ್ಮರಾಯರ ಸಮಕ್ಷಮದಲ್ಲಿ ವಿಚಾರಣೆಗೆ ಎರವಾಗುತ್ತವೆ. ಈ ಜನ್ಮದಲ್ಲಿ ನಾವು ಗಳಿಸಿದ ಪುಣ್ಯ ಪಾಪಗಳು ನಮ್ಮ ಮುಂದಿನ ಜನ್ಮದ ಮೇಲೆ ಪ್ರಭಾವವನ್ನು ಬೀರುತ್ತವೆ. ಆದ್ದರಿಂದ ನಾವು ಭೂಲೋಕದಲ್ಲಿ ಜೀವಿಸುವಾಗ ಕೇವಲ ಲೌಕಿಕ ಜೀವನದ ಪ್ರಭಾವ ಮತ್ತು ಅನೇಕ ಬಂಧನಕ್ಕೊಳಗಾಗಿ ಜೀವನಕ್ಕೆ ಮಾತ್ರ ಉಪಯುಕ್ತವಾಗುವ ಪ್ರಗತಿಪರವಾದ ಕಾರ್ಯಗಳಲ್ಲಿಯೇ ಅನುರಕ್ತರಾಗದೇ ಪಾರಲೌಕಿಕ ದೃಷ್ಟಿಯನ್ನೂ ಗಮನದಲ್ಲಿಟ್ಟುಕೊಂಡು, ವಿಧಿ-ನಿಷೇಧಗಳನ್ನು ಶಾಸ್ತ್ರಗಳಿಂದಲೂ ಮತ್ತು ಬಲ್ಲವರಿಂದಲೂ ತಿಳಿದುಕೊಂಡು ಹರಿಪ್ರೀತಿಕರವಾದ ಕಾರ್ಯಗಳನ್ನು ಕಾಯಾವಾಚಾ ಮನಸಾ ಆಚರಿಸಿ ಭಗವಂತನಲ್ಲಿ ಸಮರ್ಪಿಸುವುದರಲ್ಲಿಯೂ ಆಸಕ್ತಿ ವಹಿಸಬೇಕು. ಆದ್ದರಿಂದ ನಾವು ಇಹ ಮತ್ತು ಪರ ಎರಡರ ಕಡೆಗೂ ಲಕ್ಷ್ಯ ವಿಟ್ಟು ಉಭಯದೃಷ್ಟಿಯಿಂದಲೂ ಯಶೋಭಾಗಿಯಾಗೋಣ. ಆಸಕ್ತಿಯುಳ್ಳವರಾಗೋಣ.

---------------------------------------------------------------------------------